ಓ.ಎಸ್. ನಂ.75/2013
ಡಿಡಬ್ಲು-1

ದಿನಾಂಕ 12.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ನನಗೆ ಓದಲು ಬರೆಯಲು ಬರುವುದಿಲ್ಲ. ಹೀಗೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಹೆಬ್ಬಟ್ಟಿನ ಸಹಿ ಮಾಡುತ್ತೀರಾ ಎಂದರೆ ಸಾಕ್ಷಿ ನನಗೆ ಸ್ವಲ್ಪ ಸ್ವಲ್ಪ ಸಹಿ ಮಾಡಲು ಬರುತ್ತದೆ ಎಂದು ಹೇಳುತ್ತಾರೆ. ನಾನು ಮತಕೋಡ ಗ್ರಾಮದ ಸರಾಕರಿ ಶಾಲೆಯಲ್ಲಿ 1 ರಿಂದ 4ನೆ ತರಗತಿ ಶಾಲೆ ಕಲಿತಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು 5 ರಿಂದ 8ನೆ ತರಗತಿವರೆಗೆ ಇಜೇರಿಯ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುತ್ತಕೋಡ ಗ್ರಾಮದಲ್ಲಿ ವಿಶ್ವಕರ್ಮ ಸಮಾಜದಲ್ಲಿ ಮಾನಪ್ಪ ಎಂಬ ಹೆಸನವ ನಾನೊಬ್ಬನೆ ಇರುತ್ತೇನೆ ಎಂದರೆ ಸರಿ. ಮುತ್ತಕೋಡ ಗ್ರಾಮದಲ್ಲಿ ಮಾನಪ್ಪ ಎಂಬ ಹೆಸನವ ನೀನೊಬ್ಬನೆ ಇರುತ್ತೀರಾ ಎಂದರೆ ಸಾಕ್ಷಿ ಇನ್ನೂ ಬೇರೆಯರು ಇರುತ್ತಾರೆ ಎಂದು ಹೇಳುತ್ತಾರೆ.

ನನ್ನ ಅಜ್ಜನ ಹೆಸರು ನನಗೆ ಗೊತ್ತಿಲ್ಲ. ಗುರಪ್ಪನಿಗೆ 04 ಜನ ಖಾಸ ಅಣ್ಣತಮ್ಮಂದಿರು ಇರುತ್ತಾರೆ. ನಿಮ್ಮ ತಾಯಿಯ ಹೆಸರು ಏನು ಇರುತ್ತದೆ ಎಂದರೆ ಸಾಕ್ಷಿ ಸುಭದ್ರಾ ಎಂದು ಹೇಳುತ್ತಾರೆ. ನಿಮ್ಮ ತಾಯಿಯ ಹೆಸರು ರತ್ನಮ್ಮ ಇರುತ್ತದೆ ಎಂದರೆ ಸರಿಯಲ್ಲ. ಮಹಾರುದ್ರಪ್ಪನ ಹೆಂಡತಿ ಹೆಸರು ಖಾಸಿಬಾಯಿ ಎಂದು ಇರುತ್ತದೆ. ಜಗದೇವಪ್ಪನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಜಗದೇವಪ್ಪನಿಗೆ 03-ಜನ ಮಕ್ಕಳಿದ್ದು ಅವರ ಹೆಸರು ರಾಮಚಂದ್ರ, ದೇವಣ್ಣ ಮತ್ತು ಈರಣ್ಣ ಇರುತ್ತದೆ. ವೀರಭದ್ರಪ್ಪನಿಗೆ ಇಬ್ಬರು ಹೆಂಡತಿಯರಿದ್ದು ಮೊದಲನೆ ಹೆಂಡತಿಯ ಹೆಸರು ರತ್ನಮ್ಮ ಮತ್ತು ಎರಡನೆ ಹೆಂಡತಿ ಹೆಸರು ಶಾಂಬಾಯಿ ಎಂದು ಇರುತ್ತದೆ. ರತ್ನಮ್ಮಳಿಗೆ 03-ಜನ ಮಕ್ಕಳಿದ್ದು ಅವರ ಹೆಸರು ಶಿರಸಣ್ಣ, ನಿಂಗಣ್ಣ, ಭೀಮಣ್ಣ ಇರುತ್ತದೆ. ಅವರಿಗೆ ಹೆಣ್ಣುಮಕ್ಕಳು ಇರುವುದಿಲ್ಲ. ರತ್ನಮ್ಮಳಿಗೆ ಕಸ್ತೂರಿಬಾಯಿ ಮತ್ತು ಶಾರದಾ ಎಂಬ ಹೆಣ್ಣುಮಕ್ಕಳಿರುತ್ತಾರೆ ಎಂದರೆ ಸರಿಯಲ್ಲ. ನಾನು ರತ್ನಮ್ಮಳ ಮಗ ಎಂದರೆ ಸರಿಯಲ್ಲ. ಶಾಂಬಾಯಿಯವರಿಗೆ 05-ಜನ ಮಕ್ಕಳಿದ್ದು ಅವರ ಹೆಸರು ಗಂಗಣ್ಣ, ಸುರೇಶ, ಗುರಣ್ಣ, ಕಾಶಿಪತಿ, ಕಾಳಪ್ಪ ಇರುತ್ತದೆ. ಶಾಂಬಾಯಿಗೆ ರತ್ನಮ್ಮ ಎಂಬ ಮಗಳು ಇರುತ್ತಾಳೆ ಎಂದರೆ ಸರಿಯಲ್ಲ. ಗುರಪ್ಪನಿಗೆ ಶಿರಸಮ್ಮ, ಸರಸ್ವತಿ, ಶಾಂತಮ್ಮ ಮಾತ್ರ ಮಕ್ಕಳಿರುತ್ತಾರೆ ಎಂದರೆ ಸಾಕ್ಷಿ ನಾನು ಮಗನಿರುತ್ತೇನೆ ಎಂದು ಹೇಳುತ್ತಾರೆ.

ದಾವಾಸ್ತಿ ಮೊದಲು ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ಗುರಪ್ಪರವರ

ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ದಾವಾಸ್ತಿ ಮೊದಲು ಗಂಗಪ್ಪನಿಗೆ ಸೇರಿತ್ತು ಎಂದರೆ ಸರಿಯಲ್ಲ. ಸದರಿ ಗಂಗಪ್ಪ ಮೃತಪಟ್ಟ ನಂತರ ಆತನ ಮಕ್ಕಳಾದ ಗುರಪ್ಪ, ಮಹಾರುದ್ರಪ್ಪ, ವೀರಭದ್ರಪ್ಪ, ಜಗದೇವಪ್ಪರವರ ನಡುವೆ ಪಾಲು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿ ಗಂಗಪ್ಪನಿಗೆ ಪಾಲು ಆಗಿ ಅದರಲ್ಲಿ ಗುರಪ್ಪನಿಗೆ ಪಾಲು ಬಂದಿರುತ್ತದೆ ಎಂದರೆ ಸರಿಯಲ್ಲ.

ವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ